Bruhat Bengaluru Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಬಿಬಿಎಂಪಿ/ವಾ.22/ಜೆ.ಸಿ ಉ/ಪಿಆರ್/56/2022-23

ಸಹಾಯಕ ಅಭಿಯಂತರರ ಕಛೇರಿ
ಜೆ.ಸಿ ನಗರ ಉಪ-ವಿಭಾಗ, ಪೂರ್ವ ವಲಯ
ವಿ. ನಾಗೇನಹಳ್ಳಿ, ವಾರ್ಡ್ ನಂ:22
ಬೆಂಗಳೂರು – 560032.
ದಿನಾಂಕ: 20-08-2022

## ದಿನಾಂಕ; 20-08-2022 ರಂದು ವಾರ್ಡ್ ಸಮಿತಿ ಸಭೆಯ ನಡವಳಿಗಳು;-

- ಶ್ರೀ. ಮೊಹಮ್ಮದ್ ಜಾವೀದ್ ಎ.ಎಸ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ನೋಡೆಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು
- ಶ್ರೀ. ಗುರುಸಿದ್ದಪ್ಪ .ಜಿ ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿ ರವರು
- ಶ್ರೀಮತಿ. ಉಷಾರಾಣಿ, ಹಿರಿಯ ಆರೋಗ್ಯ ಪರಿವೀಕ್ಷಕರು, ಘನತ್ಯಾಜ್ಯ ನಿರ್ವಹಣೆ
- ಶ್ರೀ. ಮಧು, ಕಿರಿಯ ಆರೋಗ್ಯ ಪರಿವೀಕ್ಷಕರು, ಘನತ್ಯಾಜ್ಯ
- ಶ್ರೀಮತಿ. ಉಷಾರಾಣಿ, ಮಹಿಳಾ ಕಲ್ಯಾಣ ಇಲಾಖೆ
- ಶ್ರೀ. ಮುನಿರಾಮಣ್ಣ, ವಾರ್ಡ್ ಕಾಂಗ್ರೆಸ್ ಸದಸ್ಯರು
- ಶ್ರೀಮತಿ. ರಾಜೇಶ್ವರಿ, ಸರ್ಕಾರಿ ಆಸ್ಪತ್ರೆ ಚೋಳನಾಯಕನಹಳ್ಳಿ(TBHR), ಆರೋಗ್ಯ ಪರೀವೀಕ್ಷಕರು
- ಶ್ರೀಮತಿ. ಆಶಾ ಸರ್ಕಾರಿ ಆಸ್ಪತ್ರೆ ಸಿಬ್ಬಂದಿ (ನರ್ಸ್)
- ಶ್ರೀ. ಅಮ್ಜದ್ ಅಹಮ್ಮದ್, ಕೆ.ಆರ್.ಡ್ಬ್ಲ್ಯೂ.ಎ ಅಧ್ಯಕ್ಷರು ಕನಕನಗರ
- ಶ್ರೀ. ಉದಯ್ ಚಂದನ್, ಕೆ.ಆರ್.ಡ್ಬ್ಲ್ಯೂ.ಎ ಸದಸ್ಯರು ಕನಕನಗರ
- ಶ್ರೀ. ಚಂದ್ ಪಾಷಾ, ಕೆ.ಆರ್.ಡ್ಬ್ಲ್ಯೂ.ಎ ಸದಸ್ಯರು ಕನಕನಗರ
- ಶ್ರೀ. ಚೆನ್ನಪ್ಪ, ಕೆ.ಎಂ.ಡಿ.ಸಿ ನಿರ್ದೇಶಕರು
- ಶ್ರೀಮತಿ ನೆನೂ ರವಿ, ನಾಗರೀಕರು ಸನ್ ರೈಸ್ ಕಾಲೋನಿ
- ಶ್ರೀಮತಿ. ಎ.ಕೆ ಪ್ರೇಮ ಕುಮಾರಿ, ನಾಗರೀಕರು ಸನ್ ರೈಸ್ ಕಾಲೋನಿ
- ಶ್ರೀ. ಕಾರ್ತಿಕ್, ನಾಗರೀಕರು ಸಿ.ಐ.ಎಲ್ ಲೇಔಟ್
- ಶ್ರೀ. ಶ್ಯಾಮ್, ನಾಗರೀಕರು ಸಿ.ಐ.ಎಲ್ ಲೇಔಟ್

- ಶ್ರೀ ಕೆ. ಸತ್ಯಮಯ, ನಾಗರೀಕರು, ಸಿ.ವಿ.ಎಲ್ ಲೇಔಟ್
- ಶ್ರೀ ಕೀರ್ತಿ ರಾಜನ್.ಕೆ, ನಾಗರೀಕರು, ಸಿ.ವಿ.ಎಲ್ ಲೇಔಟ್
- ಶ್ರೀ. ಟಿ. ಶಿವಕುಮಾರ್, ನಾಗರೀಕರು, ಸಿ.ವಿ.ಎಲ್ ಲೇಔಟ್
- ಶ್ರೀ ಎಸ್. ಮುನಿಕೃಷ್ಣ, ನಾಗರೀಕರು, ಸಿ.ವಿ.ಎಲ್ ಲೇಔಟ್
- ಶ್ರೀ. ಪಿ. ಹರಿನಾರಾಯಣ ರಾಜು, ನಾಗರೀಕರು, ಸಿ.ವಿ.ಎಲ್ ಲೇಔಟ್.
- ಶ್ರೀ. ಎಲ್.ವಿ ತೇಜಸ್ವಿ, ನಾಗರೀಕರು, ಸಿ.ವಿ.ಎಲ್ ಲೇಔಟ್

ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಸಮಿತಿ ಕಾರ್ಯದರ್ಶಿಯವರಾದ ಶ್ರೀ. ಗುರುಸಿದ್ದಪ್ಪ .ಜಿ. ವಾರ್ಡ್ ಸಮಿತಿ ಅಧ್ಯಕ್ಷರು, ಸಮಿತಿಯ ಸದಸ್ಯರುಗಳು ಹಾಗೂ ವಾರ್ಡ್ ಸಂಖ್ಯೆ: 22ರ ನಾಗರೀಕರು ಹಾಗೂ ಎಲ್ಲ ವೃಂದದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸಿದರು.

ಶ್ರೀ. ಗುರುಸಿದ್ದಪ್ಪ. ಜಿ ವಾರ್ಡ್ ಕಾರ್ಯದರ್ಶಿಗಳು ಸಭೆಗೆ ಹಾಜರಿದ್ದ ಅಧಿಕಾರಿಗಳ ಪರಿಚಯ ಮಾಡಿಕೊಳ್ಳುವುದರ ಮುಖಾಂತರ ಸ್ವಾಗತವನ್ನು ಕೋರಿದರು. ಹಾಗೂ ವಾರ್ಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಎಲ್ಲರನ್ನು ಕೋರಿ ಸಭೆಯಲ್ಲಿ ನಡೆಯುವ ನಡವಳಿಗಳನ್ನು ನಮೂದಿಸಲು ತಿಳಿಸಿದರು. ಹಾಗೂ ದಿನಾಂಕ: 16–07–2022 ರಂದು ನಡೆದ ವಾರ್ಡ್ ಸಮಿತಿಯ ನಡವಳಿಗಳನ್ನು ಮನರಾವಲೋಕನ ಮಾಡಲಾಯಿತು. ಹಿಂದಿನ ಸಭೆಯಲ್ಲಿ ತೆಗೆದುಕೊಂಡಿದ್ದ ತೀರ್ಮಾನಗಳನ್ನು ಕುರಿತು ಈ ದಿನಾಂಕದವರೆಗೆ ನಿರ್ವಹಿಸಿದ ಕೆಲಸಗಳ ಬಗ್ಗೆ ಸದಸ್ಯರುಗಳಿಗೆ ತಿಳಿಸಲಾಯಿತು.

- ಶ್ರೀ. ಮೊಹಮ್ಮದ್ ಜಾವೀದ್ ಎ.ಎಸ್, ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ, ಸಭೆಗೆ ಎಲ್ಲಾ ಇಲಾಖೆಯ ಅಧಿಕಾರಿಗಳು ತಪ್ಪದೇ ಹಾಜರಾಗುವಂತೆ ತಿಳಿಸಿದರು. ತಪ್ಪಿದ್ದಲ್ಲಿ ಗೈರುಹಾಜರಾದ ಇಲಾಖೆಯ ಅಧಿಕಾರಿಗಳಿಗೆ ನೋಟೀಸ್ ಜಾರಿ ಮಾಡಲು ತಿಳಿಸಿದರು.
- ಶ್ರೀ. ಶಿವಶಂಕರ, ನಾಗರೀಕರು ಮಾತನಾಡುತ್ತಾ, ಸಿ.ವಿ.ಎಲ್ ಲೇಔಟ್‌ನ 1ನೇ ಕ್ರಾಸ್ ನಿಂದ 7ನೇ ಕ್ರಾಸ್ ರಸ್ತೆಯ ವರೆಗೆ ಅಡ್ಡಮೋರಿಯು ಹಾಳಾಗಿರುವುದರಿಂದ ಕೂಡಲೇ ಮೋರಿಯನ್ನು ಸ್ವಚ್ಛಗೊಳಿಸುವಂತೆ ತಿಳಿಸಿದರು. ಮತ್ತು ರಸ್ತೆಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮರಾಗಳನ್ನು ಅಳವಡಿಸುವಂತೆ ತಿಳಿಸಿದರು.
- ಶ್ರೀ ಸತ್ಯಮಯ, ನಾಗರೀಕರು ಮಾತನಾಡುತ್ತಾ, ಸನ್ ರೈಸ್ ಕಾಲೋನಿಯ 5ನೇ ಕ್ರಾಸ್ ರಸ್ತೆಯಲ್ಲಿ ಒಳಚರಂಡಿಯು ಹಾಳಾಗಿರುವುದರಿಂದ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ ಶೀಘ್ರವಾಗಿ ಸರಿಪಡಿಸುವಂತೆ ತಿಳಿಸಿದರು.
- ಶ್ರೀಮತಿ. ಎ.ಕೆ ಪ್ರೇಮ ಕುಮಾರಿ, ನಾಗರೀಕರು ಮಾತನಾಡುತ್ತಾ, ಸನ್ ರೈಸ್ ಕಾಲೋನಿಯ 1ನೇ ಕ್ರಾಸ್ ರಸ್ತೆಯಿಂದ 3ನೇ ಕ್ರಾಸ್ ರಸ್ತೆಯವರೆಗೆ ಅಡ್ಡಮೋರಿಯು ಹಾಳಾಗಿರುವುದರಿಂದ ಅಡ್ಡಮೋರಿಯನ್ನು

Bruhat Bengaluru Mahanagara Palike

ಸ್ವಚ್ಛಗೊಳಿಸುವಂತೆ ತಿಳಿಸಿದರು. ಹಾಗೂ ಸನ್ ರೈಸ್ ಕಾಲೋನಿಯ ಮುಖ್ಯರಸ್ತೆಗಳಲ್ಲಿ ಹೊಸದಾಗಿ ಸಿ.ಸಿ.ಟಿ.ವಿ ಕ್ಯಾಮರಾಗಳನ್ನು ಅಳವಡಿಸುವಂತೆ ತಿಳಿಸಿದರು.

- ಶ್ರೀಮತಿ ರಾಜೇಶ್ವರಿ, ಸರ್ಕಾರಿ ಆಸ್ಪತ್ರೆ ಟೋಳನಾಯಕನಹಳ್ಳಿ(TBHR), ಆರೋಗ್ಯ ಪರೀವೀಕ್ಷಕರು, ಮಾತನಾಡುತ್ತಾ, ವಾರ್ಡಿನಲ್ಲಿ ಮಂಕಿ ಪಾಕ್ಸ್ ವೈರಾಸ್ ರೋಗವು ಹರಡುವ ಸಾಧ್ಯತೆಗಳಿರುವುದರಿಂದ ಅದನ್ನು ತಡೆಗಟ್ಟುವಂತೆ ಸೂಕ್ತ ಮುಂಜಾಗ್ರತ ಕ್ರಮಕೈಗೊಳ್ಳುತ್ತೀರುವ ಬಗ್ಗೆ ತಿಳಿಸಿದರು.

- ಮಂಕಿಪಾಕ್ಸ್ ವೈರಾಸ್ ಸೋಕಿಂತ ವ್ಯಕ್ತಿಯಿಂದ ಮತ್ತೊಬ್ಬರ ವ್ಯಕ್ತಿಗೆ ಹರಡುವುದರಿಂದ , ತಲೆನೋವು, ಸ್ನಾಯು ನೋವು, ಬೆನ್ನು ನೋವು, ಊದಿಕೊಂಡ ದುಗ್ಧರಸ ಗ್ರಂಥಿಗಳು, ಮತ್ತು ಶೀತ ಈ ರೀತಿಯಾದ ಯಾವುದೇ ರೋಗ ಲಕ್ಷಣ ಕಂಡು ಬಂದಲ್ಲಿ ಜನರು ನಿರ್ಲಕ್ಷಿಸದೇ ಹತ್ತಿರ ಆಸ್ಪತ್ರೆಯಲ್ಲಿ ತೆರಳಿ ತಪ್ಪದೇ ಚಿಕಿತ್ಸೆ ಪಡೆದುಕೊಳ್ಳಬೇಕೆಂದು ತಿಳಿಸಿದರು.

- ಶ್ರೀ. ಉದಯ್ ಚಂದನ್, ಕೆ.ಆರ್.ಡ್ಬ್ಲ್ಯುಎ ಸದಸ್ಯರು ಮಾತನಾಡುತ್ತಾ, ಕನಕನಗರದ 10ನೇ ಕ್ರಾಸ್ ರಸ್ತೆಯಲ್ಲಿ ಅಡ್ಡಮೋರಿ ರಸ್ತೆಯು ಹಾಳಾಗಿರುವುದರಿಂದ ಅಡ್ಡಮೋರಿಯನ್ನು ಸ್ವಚ್ಛಗೊಳಿಸುವಂತೆ ತಿಳಿಸಿದರು ಹಾಗೂ ಕಸವು ರಸ್ತೆ ಬದಿಯಲ್ಲಿ ಅಲ್ಲಲ್ಲಿ ಬಿದ್ದಿರುವುದರಿಂದ ಕೂಡಲೇ ರಸ್ತೆಯ ಬದಿಯಲ್ಲಿರುವ ಕಸವನ್ನು ತೆರವುಗೊಳಿಸುವಂತೆ ತಿಳಿಸಿದರು.

- ಶ್ರೀ. ಅಮ್ಜದ್ ಅಹಮ್ಮದ್, ಕೆ.ಆರ್.ಡ್ಬ್ಲ್ಯುಎ ಅಧ್ಯಕ್ಷರು ಮಾತನಾಡುತ್ತಾ, ಕನಕನಗರದ ಮುಖ್ಯರಸ್ತೆಗಳಲ್ಲಿ ಕಸದ ಸಮಸ್ಯೆಯನ್ನು ಎದುರಿಸುತ್ತಿರುವುದರಿಂದ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ ಕಸದ ಸಮಸ್ಯೆಯನ್ನು ಬಗೆಹರಿಸಬೇಕೆಂದು ತಿಳಿಸಿದರು. ಹಾಗೂ ಕನಕನಗರದ 21ನೇ ಕ್ರಾಸ್ ರಸ್ತೆಯಲ್ಲಿರುವ Street light ಗಳಿಗೆ ಎಲ್.ಇ.ಡಿ ಬಲ್ಬ್‌ಅನ್ನು ಅಳವಡಿಸುವಂತೆ ತಿಳಿಸಿದರು.

- ಶ್ರೀ. ಚಂದ್ ಪಾಷಾ, ಕೆ.ಆರ್.ಡ್ಬ್ಲ್ಯುಎ ಸದಸ್ಯರು, ಮಾತನಾಡುತ್ತಾ, ಕನಕನಗರದ ಮುಖ್ಯ ಹಾಗೂ ಅಡ್ಡರಸ್ತೆಯ ಫುಟ್ ಪಾತ್‌ರಸ್ತೆಗಳಲ್ಲಿ ಅಲ್ಲಲ್ಲಿ ಕಸ, ಪೈಪುಗಳು ಹಾಗೂ ಕಟ್ಟಡ ಸಾಮಗ್ರಿಗಳು ಬಿದ್ದಿರುವುದರಿಂದ ಕೂಡಲೇ ಅದನ್ನು ಸ್ವಚ್ಛಗೊಳಿಸುವಂತೆ ತಿಳಿಸಿದರು. ಹಾಗೂ ಕನಕನಗರದ 14ನೇ ಕ್ರಾಸ್ ರಸ್ತೆಯು ತೀರಾ ಹಾಳಾಗಿರುವುದರಿಂದ ರಸ್ತೆಯನ್ನು ಮರು ಡಾಂಬರೀಕರಣ ಮಾಡುವಂತೆ ತಿಳಿಸಿದರು.

- ಕನಕನಗರದ 19ನೇ ಕ್ರಾಸ್ ರಸ್ತೆಯಲ್ಲಿ ಹಾವುಗಳ ಸಮಸ್ಯೆ ಇರುವುದರಿಂದ ಕೂಡಲೇ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸಮಸ್ಯೆಯನ್ನು ಬಗೆಹರಿಸುವಂತೆ ತಿಳಿಸಿದರು.

- ಶ್ರೀ. ಶ್ಯಾಮ್, ನಾಗರೀಕರು ಮಾತನಾಡುತ್ತಾ, ಸನ್ ರೈಸ್ ಕಾಲೋನಿಯ 3ನೇ ಅಡ್ಡರಸ್ತೆಯ ಬದಿಯಲ್ಲಿ ಅಲ್ಲಲ್ಲಿ ಕಸ ಬಿದ್ದಿರುವುದರಿಂದ ಕೂಡಲೇ ಅದನ್ನು ಸ್ವಚ್ಛಗೊಳಿಸುವಂತೆ ತಿಳಿಸಿದರು.

- ಶ್ರೀ. ಪಿ. ಹರಿನಾರಾಯಾಣ ರಾಜು, ನಾಗರೀಕರು ಮಾತನಾಡುತ್ತಾ, ಸಿಬಿ.ಎಲ್ ಲೇಔಟ್ ನ 7ನೇ ಕ್ರಾಸ್ ರಸ್ತೆಯಲ್ಲಿ Street light ಗಳು ಹಾಳಾಗಿರುವುದರಿಂದ ಶೀಘ್ರವಾಗಿ Street light ಗಳನ್ನು ಸರಿಪಡಿಸುವಂತೆ ತಿಳಿಸಿದರು.

- ಶ್ರೀಮತಿ ಉಷಾರಾಣಿ, ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡುತ್ತಾ, ವಾರ್ಡಿನ ಮುಖ್ಯರಸ್ತೆ ಹಾಗೂ ಅಡ್ಡರಸ್ತೆಯಲ್ಲಿ ಕಪ್ಪು ಚುಕ್ಕೆ (Black Spot) ಸ್ಥಳಗಳಲ್ಲಿ ಕಡ್ಡಾಯವಾಗಿ ಔಷಧ ಸಿಂಪಡಣೆ (Fogging spray)ಯನ್ನು ಮಾಡುತ್ತಿರುವ ಬಗ್ಗೆ ಸಭೆಗೆ ಹಾಜರಿದ್ದ ಸದಸ್ಯರಿಗೆ ತಿಳಿಸಿದರು.
- ಶ್ರೀ ಗುರುಸಿದ್ದಪ್ಪ, ಸಹಾಯಕ ಅಭಿಯಂತರರು ಮಾತನಾಡುತ್ತಾ, ವಾರ್ಡ್‌ನ ವ್ಯಾಪ್ತಿಯಲ್ಲಿ ಬರುವ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳಲ್ಲಿ ಅಲ್ಲಲ್ಲಿ ಬಿದ್ದಿರುವ ರಸ್ತೆ ಗುಂಡಿಗಳನ್ನು ವೆಟ್ ಮಿಕ್ಸ್ ಮತ್ತು ಡಾಂಬರು ಮಿಶ್ರಿತ ಜಲ್ಲಿಕಲ್ಲುಗಳಿಂದ ಗುಂಡಿಗಳನ್ನು ಮುಚ್ಚುವ ಕಾಮಗಾರಿ ಈಗಾಗಲೇ ಮುಗಿಸಿರುವ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳಿಗೆ ತಿಳಿಸಲಾಯಿತು. ಅದರಂತೆ ಮೊನ್ನೆ ಬಿದ್ದ ಬಾರಿ ಮಳೆಯಿಂದಾಗಿ ಮತ್ತೆ ಅಲ್ಲಲ್ಲಿ ಬಿದ್ದಿರುವ ರಸ್ತೆ ಗುಂಡಿ (Potholes)ಗಳನ್ನು ಮುಚ್ಚಿಸಿ ರಸ್ತೆ ಸರಿಪಡಿಸಿಕೊಡುವ ಬಗ್ಗೆ ತಿಳಿಸಿದರು.

ಅಂತಿಮವಾಗಿ ಮೇಲ್ಕಂಡ ಎಲ್ಲಾ ವಿಷಯವನ್ನು ಚರ್ಚಿಸಲಾಗಿ ಹಾಗೂ ಚರ್ಚಿಸಿದ ವಿಷಯಗಳ ಬಗ್ಗೆ ಅಧಿಕಾರಿಗಳು ಮುಂದಿನ ವಾರ್ಡ್ ಸಮಿತಿ ಸಭೆಗೆ ಸಂಬಂಧಿಸಿದ ಅಧಿಕಾರಿಗಳು ಕೈಗೊಂಡಕ್ರಮದ ಬಗ್ಗೆ ವರದಿ ಪೂರ್ಣಗೊಂಡ ಭಾವಚಿತ್ರ ಹಾಗೂ ಲಿಖಿತ ವರದಿ ತಯಾರಿಸಿಕೊಂಡು ಹಾಜರಾಗಲು ಸೂಚಿಸಿ ಹಾಗೂ ಹಾಜರಾಗದೆ ಇರುವ ಅಧಿಕಾರಿಗಳು ಮುಂದಿನ ಸಭೆಯಲ್ಲಿ ಹಾಜರಾಗಿರಬೇಕೆಂದು ಸೂಚಿಸಿದರು. ಸಭೆಯನ್ನು ಅಧ್ಯಕ್ಷರ ಅಪ್ಪಣೆ ಮೇರೆಗೆ ವಾರ್ಡ್ ಸಮಿತಿ ಕಾರ್ಯದರ್ಶಿಯವರಾದ ಗುರುಸಿದ್ದಪ್ಪ .ಜಿ ರವರ ವಂದನಾರ್ಪಣೆಯೊಂದಿಗೆ ಮಧ್ಯಾಹ್ನ 01:25ಕ್ಕೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಗುರುಸಿದ್ದಪ್ಪ .ಜಿ)
ವಾರ್ಡ್ ಸಮಿತಿ ಕಾರ್ಯದರ್ಶಿ
ಹಾಗೂ
ಸಹಾಯಕ ಅಭಿಯಂತರರು ವಾರ್ಡ್ ನಂ:22

(ಶ್ರೀ. ಮೊಹಮ್ಮದ್ ಜಾವೀದ್ ಎ.ಎಸ್)
ನೋಡೆಲ್ ಅಧಿಕಾರಿರವರು
ಹಾಗೂ
ವಾರ್ಡ್ ಸಮಿತಿ ಅಧ್ಯಕ್ಷರು